ಪ್ರಾರಂಭಿಸಲು ಕೇಂದ್ರ ಸರ್ಕಾರ ಮತ್ತು ಭಾರತೀಯ ವೈದ್ಯಕೀಯ ಪರಿಷತ್ತಿಗೆ ಅರ್ಜಿಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಗ್ರಾಮೀಣ ಸಾರಿಗೆ ಸುಧಾರಣೆ:

758 (1425); ಡಾ॥ ಸುಧಾಕರ್ ಕೆ.

(ಅ) ಗ್ರಾಮೀಣ ಸಾರಿಗೆ ಬಸ್‌ಗಳು ಅಲ್ಲಲ್ಲಿ ಕೆಟ್ಟು ನಿಲ್ಲುವುದರಿಂದ ಪ್ರಯಾಣಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ದಿನ ನಿತ್ಯ ಬಸ್ಸನ್ನೇ ಅವಲಂಬಿಸಿರುವ ವಿದ್ಯಾರ್ಥಿಗಳು, ರೈತರು, ಉದ್ಯೋಗಿಗಳು, ರೋಗಿಗಳಿಗೆ ಇದರಿಂದಾಗುವ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದಕ್ಕೆ ಪರಿ ಹಾರ ಏನು;

(ಇ) ಬಸ್‌ಗಳ ಚಾಲನಾ ಕ್ಷಮತೆ ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳು ಏನು:

(ಈ) ದುಸ್ಥಿತಿಯಲ್ಲಿರುವ ಬಸ್ ಬದಲಿಸಿ ಉತ್ತರ ಬಸ್ ಅಳವಡಿಸುವ ಬಗ್ಗೆ ಸರ್ಕಾರ ಕ್ರಮ ವಹಿಸುವುದೇ;

(ಉ) ಹೊಸದಾಗಿ ಖರೀದಿಸುವ ಬಸ್‌ಗಳನ್ನು ಗ್ರಾಮೀಣ ಭಾಗಕ್ಕೆ ಹಾಗೂ ಸಾರ್ವಜನಿಕ ಸೇವೆ ಸಂಸ್ಥೆಗೆ ನೀಡಲು ನಿರ್ಧರಿಸಲಾಗಿರುವುದೇ;

(ಊ) ಚಿಕ್ಕಬಳ್ಳಾಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿಯೂ ಕೆಲ ಭಾಗಗಳಲ್ಲಿ ಹಳೆಯ ಬಸ್‌ಗಳ ಸಂಚಾರದಿಂದ ಜನರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಕೈಗೊಂಡ ಕ್ರಮ ಏನು?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

(ಅ) ಹೌದು.

(ಆ) ರಸ್ತೆ ಸರಿಯಿಲ್ಲದ ಕಡೆಗಳಲ್ಲಿ ಟೈರ್ ಪಂಚರ್, ಸ್ಪ್ರಿಂಗ್ ಬ್ಲೇಡ್ ಕಟ್ಟಾಗುವುದು ಇತ್ಯಾದಿ ಸಣ್ಣ ಪುಟ್ಟ ತಾಂತ್ರಿಕ ದೋಷಗಳಿಂದ ಕೆಲವು ಬಸ್ಸುಗಳು ಅಲ್ಲಲ್ಲಿ ಕೆಟ್ಟು ನಿಲ್ಲುತ್ತಿವೆ. ಆದಾಗ್ಯೂ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮವನ್ನು ವಹಿಸಲಾಗುತ್ತಿದ್ದು ಅನೇಕ ಸಂದರ್ಭಗಳಲ್ಲಿ ಪರ್ಯಾಯ ವ್ಯವಸ್ಥೆಯಡಿ ಸಂಚಾರವನ್ನು ಪೂರೈಸಲಾಗುತ್ತಿದೆ.

(ಇ) ವಾಹನಗಳನ್ನು ದಿನಂಪ್ರತಿ, ವಾರಕ್ಕೊಮ್ಮೆ ಹಾಗೂ ನಿಗದಿತ ಕಿ.ಮೀ. ಗಳಿಗೆ ನಿರ್ವಹಣೆಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಹಾಗೂ ವರ್ಷಕ್ಕೊಮ್ಮೆ ಅರ್ಹತಾ ನವೀಕರಣ ಸಮಯದಲ್ಲಿ ನಿರ್ವಹಣೆ ಮಾಡುವ ಪದ್ಧತಿ ಇರುತ್ತದೆ. ತಾಂತ್ರಿಕ ಸಿಬ್ಬಂದಿಗೆ ಘಟಕ, ವಿಭಾಗ ಹಾಗೂ ಕೇಂದ್ರೀಯ ತರಬೇತಿ ಕೇಂದ್ರಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಅಲ್ಲದೆ, ಹೊಸ ರೀತಿಯ ವಾಹನಗಳನ್ನು ಖರೀದಿಸಿದಾಗ ಅಥವಾ ತಾಂತ್ರಿಕತೆಯನ್ನು ಉನ್ನತೀಕರಿಸಿದಾಗ, ಕವಚ ತಯಾರಕರಿಂದ ಪೂರಕ ತರಬೇತಿಯನ್ನು ನೀಡಲಾಗುತ್ತಿದೆ.

(ಈ) ಹೌದು. ಹಂತ ಹಂತವಾಗಿ ಹೊಸ ವಾಹನಗಳನ್ನು ಸೇರ್ಪಡೆ ಮಾಡುವ ಮೂಲಕ ದುಸ್ಥಿತಿಯಲ್ಲಿರುವ ಬಸ್ಸುಗಳನ್ನು ನಿಷ್ಕ್ರೀಯಗೊಳಿಸಲಾಗುವುದು. ವಿವರ ಕೆಳಕಂಡಂತಿದೆ.

ಸಂಸ್ಥೆ	2014–15ನೇ ಸಾಲಿನಲ್ಲಿ ಸ್ಕ್ರಾಪ್ ಮಾಡಲು ಉದ್ದೇಶಿಸಿರುವ ವಾಹನಗಳ ಸಂಖ್ಯೆ	2014–15ನೇ ಸಾಲಿನಲ್ಲಿ ಸೇರ್ಪಡೆಗೊಳಿಸಲು ಯೋಜಿಸಿರುವ ಹೊಸ ವಾಹನಗಳ ಸಂಖ್ಯೆ
ಕ ರಾ ರ ಸಾ ನಿಗಮ	934	1545
ಬೆಂ ಮ ಸಾ ಸಂಸ್ಥೆ	636	694
ವಾ ಕ ರ ಸಾ ಸಂಸ್ಥೆ	400	700
ಈ ಕ ರ ಸಾ ಸಂಸ್ಥೆ	300	500

(ಉ) ಗ್ರಾಮೀಣ ಭಾಗಕ್ಕೆ ಬೇಡಿಕೆಗೆ ಅನುಗುಣವಾಗಿ ಹೊಸ ಬಸ್ಸುಗಳನ್ನು ಪೂರೈಸಲಾಗುವುದು.

(ಊ) ಚಿಕ್ಕಬಳ್ಳಾಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಚಿಕ್ಕಬಳ್ಳಾಪುರ ವಿಭಾಗದ ಬಸ್ಸುಗಳ ಸಂಚಾರದಿಮದ ಜನರಿಎ ತೊಂದರೆಯಾಗುತ್ತಿರುವ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

2014–15ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ವಿಭಾಗದಲ್ಲಿ 68 ವಾಹನಗಳನ್ನು ನಿರುಪಯುಕ್ತಗೊಳಿಸಲು ಯೋಜಿಸಲಾಗಿದ್ದು ಆ ಪೈಕಿ ಈಗಾಗಲೇ 9 ವಾಹನಗಳನ್ನು ನಿರುಪಯುಕ್ತಗೊಳಿಸಲು ಅನುಮತಿ ನೀಡ ಲಾಗಿದೆ. ಉಳಿದ 59 ವಾಹನಗಳ ಹಾಲಿ ಭೌತಿಕ ಸ್ಥಿತಿಯನ್ನು ಪರಿಶೀಲಿಸಿ ಹಂತ ಹಂತವಾಗಿ ನಿರುಪಯುಕ್ತಗೊಳಿಸಲು ಕ್ರಮಕೈಗೊಳ್ಳ ಲಾಗುವುದು. ಈರೀತಿ ನಿರುಪಯುಕ್ತಗೊಳಿಸಲಾದ ವಾಹನಗಳ ಜಾಗ ದಲ್ಲಿ ಹೊಸ ವಾಹನಗಳನ್ನು ಸೇರ್ಪಡೆಗೊಳಿಸಲಾಗುವುದು.

ಸ್ನಾತಕೋತ್ತರ ಹಾಗೂ ಪಿ. ಜಿ. ಪಡೆದ ವೈದ್ಯರಿಗೆ ಪ್ರೋತ್ಸಾಹ ಭತ್ಯೆ

759 (1426); ಡಾ: ಸುಧಾಕರ್ ಕೆ.

(ಅ) ಸ್ನಾತಕೋತ್ತರ ಡಿಪ್ಲೋಮಾ ಹಾಗೂ ಪಿ.ಜಿ. ಪಡೆದ ವೈದ್ಯರಿಗೆ ಪ್ರೋತ್ಸಾಹ ಭತ್ಯೆ ನೀಡುವ ವಿಶೇಷ ಯೋಜನೆ ಏನಾದರೂ ಸರ್ಕಾರ ರೂಪಿಸಿದೆಯೇ; (ವಿವರ ನೀಡುವುದು)

(ಆ) ಈ ಯೋಜನೆಯಡಿ ಪ್ರೋತ್ಸಾಹ ಭತ್ಯೆ ಪಡೆಯುತ್ತಿರುವ ವೈದ್ಯರ ಸಂಖ್ಯೆ ಎಷ್ಟು? ಅದಕ್ಕಾಗಿ ಸರ್ಕಾರ ಮೀಸಲಿಟ್ಟಿರುವ ಮೊತ್ತ ಎಷ್ಟು;

(ಇ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು, ಇವರ ಸೇವೆ ಖಾಯಂಗೊಳಿಸಲು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;